## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಅಧ್ಯಾತ್ಮಚೇತಸಾ ನಿರಾಶೀಃ** | **2** |
| **ತ್ವತ್ಪ್ರೀತ್ಯರ್ಥಮ್** | **2** |
| **ತ್ವಾಮನುಸ್ಮರನ್ನೇವ** | **6** |

# ವಿಶ್ವನಂದಿನಿ ಲೇಖನಮಾಲೆ — 183

## ಅಧ್ಯಾತ್ಮಚೇತಸಾ ನಿರಾಶೀಃ

ಆಚಾರ್ಯರ ಸದಾಚಾರಸ್ಮೃತಿಯ ಈ ಪದಗಳ ಅರ್ಥಾನುಸಂಧಾನವನ್ನು ಮಾಡುತ್ತ ಶ್ರೀ ರಾಘವೇಂದ್ರಸ್ವಾಮಿಗಳು ತಿಳಿಸಿಕೊಟ್ಟ **"ತ್ವದಾಜ್ಞಯಾ, ತ್ವತ್ಪ್ರಸಾದಾತ್, ತ್ವತ್ಪ್ರೇರಣಯಾ, ತ್ವತ್ಪ್ರೀತ್ಯರ್ಥಂ, ತ್ವಾಮುದ್ದಿಶ್ಯ, ತ್ವಾಮನುಸ್ಮರನ್ನೇವ"** ಎಂಬ ಅನುಸಂಧಾನಗಳಲ್ಲಿ ಮೊದಲ ಮೂರನ್ನು ಅರ್ಥ ಮಾಡಿಕೊಂಡೆವು. ಕಡೆಯ ಮೂರು ಅನುಸಂಧಾನಗಳ ಕುರಿತು ತಿಳಿಯಲು ಗುರುಸ್ಮರಣೆ ಮಾಡಿ ಉದ್ಯುಕ್ತರಾಗೋಣ.

## ತ್ವತ್ಪ್ರೀತ್ಯರ್ಥಮ್

ಸಾಧಕನಾದವನು ಕರ್ಮಗಳ ಆಚರಣೆಯನ್ನು ಮಾಡಬೇಕಾದರೆ ಆ ಕರ್ಮಗಳ ಫಲಗಳನ್ನು ಅಪೇಕ್ಷಿಸಬಾರದು, ನಿಷ್ಕಾಮವಾಗಿ

ಕರ್ಮಾಚರಣೆಯನ್ನು ಮಾಡಬೇಕು ಎನ್ನುವದನ್ನು ಸಾಮಾನ್ಯವಾಗಿ ಎಲ್ಲರೂ ತಿಳಿದಿರುತ್ತಾರೆ.

ಆದರೆ ವಸ್ತುಸ್ಥಿತಿಯಲ್ಲಿ ಸ್ವರ್ಗ ಮತ್ತು ಐಹಿಕ ಪದಾರ್ಥ ಸುಖಗಳನ್ನು ಅಪೇಕ್ಷಿಸಿ ಮಾಡುವ ಸಕಾಮ ಕರ್ಮವಾಗುತ್ತದೆ.

ನಿಷ್ಕಾಮ ಕರ್ಮ ಎಂದರೆ ಆ ಸ್ವರ್ಗ ಮತ್ತು ಐಹಿಕ ಫಲಗಳನ್ನು ಅಪೇಕ್ಷಿಸದೇ ಮಾಡುವ ಕರ್ಮ ಎಂದಷ್ಟೇ ಹೊರತು **ಎಲ್ಲ ಅಪೇಕ್ಷೆಗಳನ್ನೂ ತ್ಯಾಗ ಮಾಡುವದು ನಿಷ್ಕಾಮಕರ್ಮವಲ್ಲ.**

ಮೋಕ್ಷ, ಜ್ಞಾನ, ಭಕ್ತಿ, ಶ್ರೀಹರಿಯ ತೃಪ್ತಿ ಮತ್ತು ಅವುಗಳ ಸಾಧನಗಳನ್ನು ಅಪೇಕ್ಷಿಸಲೇ ಬೇಕು.

ಅದಕ್ಕಾಗಿ ಶ್ರೀಮಟ್ಟೀಕಾಕೃತ್ಪಾದರು ಅಧ್ಯಾತ್ಮಚೇತಸಾ ನಿರಾಶೀಃ ಎನ್ನುವದಕ್ಕೆ **“ಪರಮಾತ್ಮಲಾಭೇನ ಇತರಾಶಾರಹಿತಃ”** ಎಂದು ಅರ್ಥವನ್ನು ಹೇಳುತ್ತಾರೆ.

ತಮ್ಮ ಗುರುಗಳ ಅಭಿಪ್ರಾಯವನ್ನು ಶ್ರೀ ವಿದ್ಯಾಧಿರಾಜತೀರ್ಥಶ್ರೀಪಾದಂಗಳವರು, ಆಚಾರ್ಯರು ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿ ತಿಳಿಸಿದ **"ಜ್ಞಾನಭಕ್ತೀ ಹರೇಸ್ತೃಪ್ತಿಂ ವಿನಾ ವಿಷ್ಣೋರಪಿ ಕ್ವಚಿತ್ ನಾಕಾಂಕ್ಷ್ಯಮ್"** ಎಂಬ ತತ್ವಗಳ ಚಿಂತನೆಯೊಂದಿಗೆ ವಿಶದೀಕರಿಸುತ್ತಾರೆ — **ನಿರಾಶೀಃ ವಿಷ್ಣುಭಕ್ತಿ-ಜ್ಞಾನ-ತೃಪ್ತಿ-ವ್ಯತಿರಿಕ್ತಕಾಮರಹಿತಃ** ಎಂದು.

ನಿರಾಶೀಃ ಎಂದರೆ ಫಲಗಳ ಆಸೆಯನ್ನು ತೊರೆದು ಎಂದರ್ಥ. ಎಲ್ಲ ಫಲಗಳ ಆಶೆಯನ್ನು ತೊರೆಯಬಾರದು. ಪರಮಾತ್ಮನಲ್ಲಿ ಭಕ್ತಿ, ಪರಮಾತ್ಮನ ಜ್ಞಾನ ಮತ್ತು ಪರಮಾತ್ಮನ ಪ್ರಸಾದ(ತೃಪ್ತಿ)ಗಳನ್ನು ಅಪೇಕ್ಷಿಸಲೇಬೇಕು. ಇವುಗಳನ್ನು ಬಿಟ್ಟು ಬೇರೆಯದನ್ನು ಪ್ರಾರ್ಥಿಸಬಾರದು ಎಂದರ್ಥ.

ಇದಲ್ಲದೇ ಸಾಧನಕ್ಕೆ ಪ್ರತಿಬಂಧಕವಾದ ಪಾಪಗಳ ವಿನಾಶ ಹಾಗೂ ಸಾಧನಕ್ಕೆ ಉಪಯೋಗಿಯಾದ ಸಂಪತ್ತು ಇವುಗಳನ್ನು ಬೇಡುವದೂ ಸಹ ನಿಷ್ಕಾಮವೇ ಆಗುತ್ತದೆ ಎಂದು

ಶ್ರೀಮದಾಚಾರ್ಯರು ಭಾಗವತತಾತ್ಪರ್ಯದಲ್ಲಿ ತಿಳಿಸುತ್ತಾರೆ. (ಈ ವಿಷಯದ ಕುರಿತು ಒಂದು ಸಣ್ಣ ಚರ್ಚೆ ಆವಶ್ಯಕವಿದೆ. ಶ್ರೀಮದ್ ಭಾಗವತ ಮತ್ತು ಗೀತೆಗಳ ಅನುವಾದದ ಸಂದರ್ಭದಲ್ಲಿ ಚರ್ಚಿಸುತ್ತೇನೆ)

**ಸಂಗ್ರಹಿಸಿ ಹೇಳಬೇಕೆಂದರೆ ನಶ್ವರವಾದ ಪದಾರ್ಥಗಳನ್ನು ಅಪೇಕ್ಷಿಸದೇ ಶಾಶ್ವತವಾದ ಮೋಕ್ಷ, ಜ್ಞಾನ, ಭಕ್ತಿ, ವೈರಾಗ್ಯ, ವಿಷ್ಣುತೃಪ್ತಿಗಳನ್ನು ಅಪೇಕ್ಷಿಸಿ ಸತ್ಕರ್ಮಗಳ ಆಚರಣೆಯನ್ನು ಮಾಡಬೇಕು ಎನ್ನುವದು ಅಧ್ಯಾತ್ಮಚೇತಸಾ ನಿರಾಶೀಃ ಎನ್ನುವದರ ಅರ್ಥ.**

ಪರಮಾತ್ಮ ನಮಗೆ ಮೋಕ್ಷ ನೀಡಬೇಕೆಂದರೂ ನಮ್ಮಲ್ಲಿ ಪ್ರಸನ್ನನಾಗಬೇಕು, ಜ್ಞಾನ ನೀಡಬೇಕೆಂದರೂ ಪ್ರಸನ್ನನಾಗಬೇಕು, ಭಕ್ತಿ ನೀಡಬೇಕೆಂದರೂ ಪ್ರಸನ್ನಾಗಬೇಕು, ವೈರಾಗ್ಯವನ್ನು ಅನುಗ್ರಹಿಸಬೇಕೆಂದರೂ ಪ್ರಸನ್ನನಾಗಬೇಕು, ಆತ್ಮತೃಪ್ತನಾದ ತಾನು ನಮ್ಮ ಕರ್ಮಗಳಿಂದ ತೃಪ್ತನಾಗಬೇಕೆಂದರೂ ಪ್ರಸನ್ನನಾಗಬೇಕು. ಹೀಗಾಗಿ ಈ ಎಲ್ಲವನ್ನೂ ಕ್ರೋಢೀಕರಿಸಿ ಶ್ರೀ

ರಾಘವೇಂದ್ರಗುರುಸಾರ್ವಭೌಮರು ಅನುಸಂಧಾನ ಮಾಡುವ ಬಗೆಯನ್ನು ನಮಗೆ ಹೇಳಿಕೊಟ್ಟರು — **ತ್ವತ್ಪ್ರೀತ್ಯರ್ಥಮ್** ಎಂದು.

ಯಾವುದೇ ಸತ್ಕರ್ಮವನ್ನು ನಾವು ಮಾಡಲಿ — ಆಚಮನದಿಂದ ಹಿಡಿದು ದೇವರ ಪೂಜೆಯ ವರೆಗೆ, ಜಪದಿಂದ ಹಿಡಿದು ಶಾಸ್ತ್ರ ಅಧ್ಯಯನ ವ್ಯಾಖ್ಯಾನಗಳ ವರೆಗೆ — ಎಲ್ಲವನ್ನೂ "ಶ್ರೀಹರೇ, ನಿನ್ನ ಪ್ರೀತಿಗಾಗಿ ಮಾಡುತ್ತಿದ್ದೇನೆ" ಎಂಬ ಅನುಸಂಧಾನ ನಮ್ಮಲ್ಲಿರಬೇಕು. "ಪ್ರೀತನಾಗು ಸ್ವಾಮಿ, ಪ್ರೀತನಾಗಿ ಜ್ಞಾನ ಭಕ್ತಿ ವೈರಾಗ್ಯಗಳನ್ನು ಕರುಣಿಸು" ಎಂದು ಅನವರತ ಪ್ರಾರ್ಥಿಸುತ್ತಿರಬೇಕು.

## ತ್ವಾಮನುಸ್ಮರನ್ನೇವ

ಅಧ್ಯಾತ್ಮಚೇತಸಾ ಎನ್ನುವದರ ಮುಖ್ಯಾರ್ಥವಿದು. ಶ್ರೀಹರಿಯಲ್ಲಿಯೇ ಮನಸ್ಸು ನೆಟ್ಟಿರಬೇಕು. ಕರ್ಮದ ಆದಿಯಲ್ಲಿ, ಕರ್ಮ ನಡೆಯುವಾಗ, ಕರ್ಮ ಮುಗಿಯುವಾಗ, ಮುಗಿದ ನಂತರ ಹೀಗೆ ನಿರಂತವಾಗಿ ದೇವರ ಸ್ಮರಣೆಯಿರಬೇಕು.

ಕರ್ಮಗಳ ಆಚರಣೆಯನ್ನು ಮಾಡಬೇಕಾದರೆ ಮೊದಲು ನಮಗಿರಬೇಕಾದ ಎಚ್ಚರ, ನಾವು ಅಲ್ಪರು ಎನ್ನುವದು. ಕರ್ಮಗಳ ಜ್ಞಾನವೇ ಮೊದಲಿಗೆ ಪರಿಪೂರ್ಣವಾಗಿರುವದಿಲ್ಲ. ಕರ್ಮದ ಪರಿಕರಗಳು, ಮಂತ್ರಗಳು, ಪರಿಸರ ಹೀಗೆ ಎಲ್ಲದರಲ್ಲಿಯೂ ನ್ಯೂನತೆಯಿರುತ್ತದೆ.

ಈ ರೀತಿಯಿದ್ದಾಗ ಕರ್ಮ ಸಫಲವಾಗುವದೆಂತು? ನಮ್ಮ ಮಾನುಷಪ್ರಯತ್ನಕ್ಕೆ ನಿಲುಕುವಷ್ಟು ಶುದ್ಧವಾದ ಕ್ರಮದಲ್ಲಿ ಕರ್ಮಗಳನ್ನು ಆಚರಿಸಬೇಕು, ಆ ಮಾನುಷ ಪ್ರಯತ್ನವನ್ನೇ ಸರಿಯಾಗಿ ಮಾಡದೆ ಇದ್ದದ್ದರಲ್ಲಿ ಮುಗಿಸುತ್ತೇನೆ ಎನ್ನುವದು ಆಲಸಿತನ ದುರಹಂಕಾರಗಳ ಪ್ರತೀಕವಾಗುತ್ತದೆ, ಸತ್ಯ.

ಆದರೆ, ಪ್ರಾಮಾಣಿಕವಾದ ಶ್ರದ್ಧೆಯಿಂದ ನಾವು ಅದೆಷ್ಟೇ ಪರಿಶುದ್ಧಿಯನ್ನು ಕಾಯ್ದುಕೊಂಡರೂ ಅವುಗಳಲ್ಲಿ ಲೋಪವಿದ್ದೇ ಇರುತ್ತದೆ. ಅದರಲ್ಲಿಯೂ ಇದು ಕಲಿಗಾಲ.

◌ುವ ಕರ್ಮಗಳು ಪೂರ್ಣವಾಗಿ ವ್ಯರ್ಥವೇ ಆಗುತ್ತದೇನು ಎನ್ನುವದಕ್ಕೆ ಶಾಸ್ತ್ರ ನೀಡುವ ಉತ್ತರ — ನಿನಗೆ ನಿಲುಕುವಷ್ಟು ಶಕ್ತಿಯಿಂದ ಪ್ರಯತ್ನ ಪಟ್ಟು  ಕರ್ಮದ ಆಚರಣೆ ನಡೆಯುವಾಗ ನಿರಂತರ ವಿಷ್ಣು-ವೈಷ್ಣವರ ಸ್ಮರಣೆಯನ್ನು ಮಾಡುತ್ತಿರು. ದೇವರ ಸ್ಮರಣೆ ಸಕಲ ಲೋಪಗಳನ್ನೂ ತುಂಬಿಸುತ್ತದೆ.

**ಮಂತ್ರತಃ ತಂತ್ರತಃ ಛಿದ್ರಂ**
**ದೇಶಕಾಲಾರ್ಹವಸ್ತುತಃ ।**
**ಸರ್ವಂ ಕರೋತಿ ನಿಶ್ಛಿದ್ರಂ**
**ಅನುಸಂಕೀರ್ತನಂ ತವ ।।**

ಮಂತ್ರದಲ್ಲಿನ ಲೋಪ, ಕ್ರಿಯೆಯಲ್ಲಿನ ಲೋಪ, ದೇಶ, ಕಾಲ, ಪದಾರ್ಥಗಳಲ್ಲಿನ ಲೋಪ ಎಲ್ಲವನ್ನೂ ಶ್ರೀಹರೇ, ನಿನ್ನ ಮತ್ತು ನಿನ್ನವರ ಸ್ಮರಣೆ ಪರಿಹರಿಸುತ್ತದೆ.

ಶಾಸ್ತ್ರ ಆದೇಶ ಮಾಡಿದಂತೆ ನಾವು ಜೀವನ ನಡೆಸುವಾಗ ನಮ್ಮ ಜೀವನದ ಪ್ರತಿಯೊಂದು ಕರ್ಮವೂ ಸಾಧನಕರ್ಮವೇ. ಅಪರೋಕ್ಷಜ್ಞಾನ

ಸಾಧನವೇ. ಹೀಗಾಗಿ ಬೆಳಗಿನಿಂದ ಸಂಜೆಯವರೆಗೆ ನಿರಂತರ ವಿಷ್ಣುಸ್ಮರಣೆ ನಮ್ಮಲ್ಲಿರಬೇಕು.

ಭಾಗವತದಲ್ಲಿ ಒಂದು ಮಾತಿದೆ —

**ಕೃತಾದಿಷು ಪ್ರಜಾ ರಾಜನ್**
**ಕಲಾವಿಚ್ಛಂತಿ ಸಂಭವಮ್ ।**
**ಯತ್ರ ಸಂಕೀರ್ತಿತೋ ನೃಣಾಂ**
**ಹರಿರ್ದಾಸ್ಯತ್ಯಸಂಭವಮ್ ॥**

ಎಂದು. ಕೃತಯುಗದ ಸಜ್ಜನರು "ಕಲಿಯುಗದಲ್ಲಿ ಹುಟ್ಟಿಬರಬೇಕು" ಎಂದು ಬಯಸುತ್ತಾರೆ. ಕಾರಣ, ಕಲಿಯುಗದಲ್ಲಿ ಕೇವಲ ಸಂಕೀರ್ತನೆಯಿಂದ ಭಗವಂತ ಒಲಿದುಬಿಡುತ್ತಾನೆ. ಇಷ್ಟು ಅದ್ಭುತವಾದದ್ದು ಪರಮಾತ್ಮನ ನಾಮಸ್ಮರಣೆಯ ಮಾಹಾತ್ಮ್ಯ.

ಹೀಗಾಗಿ ಸತ್ಕರ್ಮಗಳನ್ನು ಆಚರಿಸುವಾಗ ಶ್ರೀಹರಿಯ ನಾಮಗಳ ಗುಣಗಳ ರೂಪಗಳ ಸ್ಮರಣೆ ನಿರಂತರ ನಮ್ಮ ಮನಸ್ಸಿನಲ್ಲಿರಬೇಕು. ನಮ್ಮ ಮನಸ್ಸನ್ನು, ದೇಹವನ್ನು, ಕರ್ಮವನ್ನು ಮಡಿ ಮಾಡಿ

ನಮ್ಮನ್ನು ಸಂಸಾರಕೂಪದಿಂದ ಉದ್ಧರಿಸಿಬಿಡುತ್ತದೆ, ಆ ಭಗವಂತನ ಸ್ಮರಣೆ. ಅನುಸ್ಮರಣೆ.

ಆ ದೇವರ ಸ್ಮರಣೆ, ದೇವರ ಭಕ್ತರ ಸ್ಮರಣೆಯೊಂದಿಗೆ ಸತ್ಕರ್ಮಗಳನ್ನು ಆಚರಿಸುವ ಸೌಭಾಗ್ಯ ಸದಾ ನಮ್ಮದಾಗಲಿ ಎಂದು ಶ್ರೀಗುರುಗಳನ್ನು ಶ್ರೀಮದಾಚಾರ್ಯರನ್ನು ಮತ್ತು ಶ್ರೀವೇದವ್ಯಾಸದೇವರನ್ನು ಪ್ರಾರ್ಥಿಸೋಣ.



— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491